ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Special Issue-3, March - April 2026, Pp. 77-85
©*IIMRD*, Mysuru
IIMRD JOURNALS
www.iimrd.com

# ಆರೋಗ್ಯ ಕ್ಷೇತ್ರದ ಸುಧಾರಣೆಗೆ ಶ್ರೀ ಕೆ.ಆರ್. ರಮೇಶ್ ಕುಮಾರ್ ರವರ ಕೊಡುಗೆಗಳು – ಒಂದು ವಿಶ್ಲೇಷಣೆ

**ವೆಂಕಟಚಲಪತಿ ಹೆಚ್.ವಿ[1] ಮತ್ತು ಡಾ. ಎನ್. ಶೇಕ್ ಮಸ್ತಾನ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಹಿರಿಯ ಶ್ರೇಣಿ ಪ್ರಾಧ್ಯಾಪಕರು
ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಸಾರಾಂಶ: (Abstract)**

*ಕರ್ನಾಟಕದ ರಾಜಕಾರಣದ ಇತಿಹಾಸದಲ್ಲಿ ಅನೇಕ ಮಹನೀಯರು, ನಾಯಕರು ಬೆಳೆದು ಬಂದು ತಮದೇ ಆದ ಛಾಪು ಮೂಡಿಸಿ ಕೊಡುಗೆಯನ್ನು ನೀಡಿದ್ದಾರೆ. ಅಂತವರ ಸಾಲಿನಲ್ಲಿ ಗುರ್ತಿಸಬಹುದಾದ ಮತ್ತೊಬ್ಬ ಮುತ್ಸದ್ಧಿ ರಾಜಕಾರಣಿ ಎಂದರೇ ಕೆ.ಆರ್. ರಮೇಶ್ ಕುಮಾರ್. ಇವರು ಕೋಲಾರ ಜಿಲ್ಲೆಯ ಶ್ರೀನಿವಾಸಪುರದ ಶಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಸುಮಾರು 4 ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಹಾಗೂ ಒಂದು ಸಲ ಜನಾತಪಕ್ಷದಿಂದ, ಇನ್ನೊಂದು ಸಲ ಜನತಾದಳದ ಅಭ್ಯರ್ಥಿಯಾಗಿ ಚುಣಾವಣೆಗಳನ್ನು ಗೆದ್ದು ಜನಪ್ರಿಯ ಶಾಸಕರಾಗಿ ಹಾಗು ಸ್ಪೀಕರ್ ಆಗಿ ಹೊರ ಹೊಮ್ಮಿರುತ್ತಾರೆ.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ರಾಜಕೀಯ, ಕೆ.ಆರ್. ರಮೇಶ್ ಕುಮಾರ್, ಮುತ್ಸದ್ಧಿ ರಾಜಕಾರಣಿ*

**ಪೀಠಿಕೆ**

ಶ್ರೀ ಕೆ.ಆರ್.ರಮೇಶ್ ಕುಮಾರ್ ಐದು ದಶಕಗಳಿಂದ ಕರ್ನಾಟಕ ರಾಜಕಾರಣದಲ್ಲಿದ್ದು ನೇರನುಡಿ ಸರಳ ವ್ಯಕ್ತಿತ್ವ, ಪ್ರಗತಿಪರ ಚಿಂತಕ, ದೂರದೃಷ್ಟಿಯ ನೇತಾರ, ಬದ್ದತೆಯ ರಾಜಕಾರಣಿಯಾಗಿ ಗುರ್ತಿಸಿಕೊಂಡಿದ್ದಾರೆ. ರಾಜಕಾರಣದಲ್ಲಿ ಶಾಸಕರಾಗಿ, ವಿಧಾನಸಭೆಯ ಸ್ಪೀಕರ್ ಆಗಿ, ಆರೋಗ್ಯ ಖಾತೆಯ ಸಚಿವರಾಗಿ ಹೀಗೆ ವಿವಿಧ ಸ್ಥಾನಗಳನ್ನು ಅಲಂಕರಿಸಿ ಅವುಗಳ ಜವಾಬ್ದಾರಿಯನ್ನ ಶಿಸ್ತುಬದ್ದವಾಗಿ ನಿಷ್ಠೆಯಿಂದ ನಿಭಾಯಿಸಿ ಮೆಚ್ಚುಗೆಯನ್ನ ಗಳಿಸಿಕೊಂಡಿದ್ದಾರೆ. ಇವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾರಾಗಿ ಜವಾಬ್ದಾರಿ ವಹಿಸಿಕೊಂಡ ಮೇಲೆ ಅದರಲ್ಲಿ ಇದ್ದ ಸಮಸ್ಯೆ ಮತ್ತು ಸವಾಲುಗಳನ್ನ ಅರಿತು ನ್ಯೂನತೆಗಳನ್ನ ಸರಿಪಡಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಿಟ್ಟರು. ಅದರಂತೆ ಕೆ.ಪಿ.ಎಂ.ಇ ಕಾಯ್ದಿಗೆ ತಿದ್ದುಪಡಿ ತಂದರು. ಆಸ್ಪತ್ರೆಗಳಲ್ಲಿನ ಸಮಸ್ಯೆಗಳನ್ನು ನಿವಾರಿಸಲು ಹೊಸ ಯೋಜನೆಗಳನ್ನು ಹಂತ ಹಂತವಾಗಿ ಜಾರಿಗೊಳಿಸಿದರು. ಬಹುತೇಕ ಎಲ್ಲಾ ಯೋಜನೆಗಳು ಬಡ ಮತ್ತು ಮದ್ಯಮ ವರ್ಗಗಳಿಗೆ

*Please cite this article as:* ವೆಂಕಟಚಲಪತಿ ಹೆಚ್.ವಿ, ಮತ್ತು ಎನ್. ಶೇಕ್ ಮಸ್ತಾನ್. (2026). ಆರೋಗ್ಯ ಕ್ಷೇತ್ರದ ಸುಧಾರಣೆಗೆ ಶ್ರೀ ಕೆ.ಆರ್. ರಮೇಶ್ ಕುಮಾರ್ ರವರ ಕೊಡುಗೆಗಳು – ಒಂದು ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 77–85

ಪ್ರಯೋಜನಕಾರಿಯಾಗುವಂತಹವೇ ಆಗಿವೆ. ಪ್ರಸ್ತುತ ಕಾಲಘಟ್ಟದ ಅವಶ್ಯಕತೆಗಳಿಗೆ ಅನುಗುಣವಾಗಿ ಆಸ್ಪತ್ರೆಗಳನ್ನ ಉನ್ನತೀಕರಿಸಿದರು.

ಈ ಒಂದು ಲೇಖನವನ್ನು ಸಿದ್ದಪಡಿಸಲು ಪ್ರಾಥಮಿಕ ಆಕರಗಳು ಮತ್ತು ಮಾದ್ಯಮಿಕ ಆಕರಗಳನ್ನ ಬಳಸಲಾಗಿದೆ. ಹಾಗೆಯೇ ಕರ್ನಾಟಕ ಸರ್ಕಾರದ ಬಜೆಟ್ ವರದಿಗಳು, ಇಲಾಖಾ ವರದಿಗಳನ್ನು ಮತ್ತು ಸಂದರ್ಶನದ ವಿಡಿಯೋಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಿ, ಈ ಲೇಖನ ಸಿದ್ದಪಡಿಸಲಾಗಿದೆ. ರಮೇಶ್ ಕುಮಾರ್ ರವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಅವರು ತಂದ ಸುಧಾರಣೆಗಳು, ಹೊಸ ಯೋಜನೆಗಳ ಅನುಷ್ಠಾನದ ಬಗ್ಗೆ ತಿಳಿದುಕೊಳ್ಳುವ ಉದ್ದೇಶದಿಂದ ಲೇಖನ ಸಿದ್ದಪಡಿಸಲಾಗಿದೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್ ರವರ ಪರಿಚಯ**

ಶ್ರೀ ಕೆ.ಆರ್. ರಮೇಶ್ ಕುಮಾರ್ ರವರು 22 ನೇ ನವೆಂಬರ್ 1949 ರಂದು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಅಡ್ಡಗಲ  ಗ್ರಾಮದಲ್ಲಿ ಬ್ರಾಹಣ ಸಮುದಾಯದ ಸಾಮಾನ್ಯ ಕುಟುಂಬದಲ್ಲಿ ಜನಿಸಿದರು. ಬೆಂಗಳೂರಿನಲ್ಲಿ ಪದವಿ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಒಮ್ಮೆ ಮಾನ್ಯ ದೇವರಾಜ್ ಅರಸ್(ಮಾಜಿ ಮುಖ್ಯಮಂತ್ರಿಗಳು) ರವರನ್ನು ಬೇಟಿಯಾಗಿದ್ದರು. ಇದಾದ ಮೇಲೆ ಅವರ ಪ್ರಭಾವಕ್ಕೆ ಒಳಗಾಗಿ, ಅವರ ಪ್ರೋತ್ಸಾಹದಿಂದ ರಾಜಕಾರಣಕ್ಕೆ ಪ್ರವೇಶ ಮಾಡಿದರು ಶ್ರೀ ರಮೇಶ್ ಕುಮಾರ್ ರವರು ಇದುವರೆಗೂ 6 ಬಾರಿ ಶಾಸಕರಾಗಿ, ಕರ್ನಾಟಕ ವಿಧಾನಸಭೆಯ 14 ನೇ ಸ್ಪೀಕರ್ ಆಗಿ 27 ಡಿಸೆಂಬರ್ 1994 ರಿಂದ 24 ಅಕ್ಟೋಬರ್ 1999 ನಡುವೆ ಜನತಾದಳ ಸರ್ಕಾರದಿಂದ ಆಯ್ಕೆಯಾಗಿ ಕಾರ್ಯನಿರ್ವಹಿಸಿದ್ದಾರೆ ಮತ್ತು 21 ನೇ ಸ್ಪೀಕರ್ ಆಗಿ ಮತ್ತೊಮ್ಮೆ 25 ಮೇ 2018 ರಿಂದ 29 ಜುಲೈ 2019 ರ ವರೆಗೂ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಸಂಮಿಶ್ರ ಸರ್ಕಾರದಲ್ಲಿ ಆಯ್ಕೆಯಾಗಿ ತಮ್ಮ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಮಾನ್ಯ ಸಿದ್ಧರಾಮಯ್ಯ  ನವರ ನೇತೃತ್ವದ ಸರ್ಕಾರದಲ್ಲಿ  ಜೂನ್ 2016 ರಿಂದ ಮೇ 2018 ರ ವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾಗಿ ಸೇವೆ ಸಲ್ಲಿಸಿ ಇಲಾಖೆಯ ದಕ್ಷತೆ ಹೆಚ್ಚಿಸಿ ಮೌಲ್ಯಯುತವಾದ ಸುಧಾರಣೆಗಳನ್ನು ತಂದು ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

**ಸಾರ್ವತ್ರಿಕ ಆರೋಗ್ಯ ರಕ್ಷಣೆ ಯೋಜನೆ–ಗಟುತಜಢಚಿಟ  ಊಜಚಿಟಣು ಅಠತಜಡಿಚಿರಿಜ**

ಕರ್ನಾಟಕ ಸರ್ಕಾರದ 2017–18 ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ  ಹೊಸ ಯೋಜನೆಯಾಗಿದೆ.[1] ಇಡೀ ಭಾರತದಲ್ಲಿ ಇಂತಹ ಯೋಜನೆ ಪ್ರಾರಂಭವಾಗಿದ್ದು ಮೊದಲು ಕರ್ನಾಟಕದಲ್ಲಿ ಅದು ರಮೇಶ್ ಕುಮಾರ್ ರವರ ನೇತೃತ್ವದಲ್ಲಿ.[2] ಕರ್ನಾಟಕದ ಆರೋಗ್ಯ ಕ್ಷೇತ್ರದಲ್ಲಿ ಇದುವರೆಗೂ ಸಮಗ್ರವಾದ ಒಂದು ಅರೋಗ್ಯ ಯೋಜನೆ ಇರಲಿಲ್ಲ ಬದಲಿಗೆ ನಾನಾ ಯೋಜನೆಗಳಿದ್ದು ವಾರ್ಷಿಕವಾಗಿ

[1] ಕರ್ನಾಟಕ ಸರ್ಕಾರದ 2017–18 ನೇ ಸಾಲಿನ ಬಜೆಟ್ ಪುಟ–64

[2] ಶ್ರೀ ಕೆ.ಆರ್. ರಮೇಶ್ ಕುಮಾರ್ ರವರೊಂದಿಗೆ ಸಂದರ್ಶನ ದಿನಾಂಕ: 12–12–2023

ಸುಮಾರು 1 ಸಾವಿರ ಕೋಟಿ ಹಣ ಖರ್ಚು ಮಾಡಲಾಗುತ್ತಿತ್ತು. ಅವುಗಳೆಂದರೇ ವಾಜಪೇಯಿ ಜನಶ್ರೀ, ರಾಜೀವ್ ಗಾಂಧೀ ಆರೋಗ್ಯ ಭಾಗ್ಯ, ರಾಷ್ಟ್ರೀಯ ಸ್ವಾಸ್ಥ್ಯ ಭೀಮ ಯೋಜನೆ, ಮುಖ್ಯಮಂತ್ರಿ ಹರೀಶ್ ಸಾಂತ್ವಾನ ಯೋಜನೆ, ಇಂದಿರಾ ಸುರಕ್ಷ ಯೋಜನೆ, ಯಶಸ್ವಿನಿ ಯೋಜನೆ ಹೀಗೆ ಹತ್ತು ಹಲವು ಯೋಜನೆಗಳು ಜಾರಿಯಲ್ಲಿದ್ದು ಗೊಂದಲದ ಗೂಡಾಗಿತ್ತು ಅವುಗಳೆಲ್ಲವನ್ನು ಒಟ್ಟುಗೂಡಿಸಿ ಸಾರ್ವತ್ರಿಕ ಆರೋಗ್ಯ ರಕ್ಷಣೆ ಯೋಜನೆಯನ್ನ ಜಾರಿಗೊಳಿಸಿ 1 ಕೋಟಿ 30 ಲಕ್ಷ ಕುಟುಂಬಗಳನ್ನ ಇದರ ವ್ಯಾಪ್ತಿಗೆ ತರಲಾಯಿತು”[3].

**ಯೋಜನೆಯ ಸಂಕ್ಷಿಪ್ತ ಮಾಹಿತಿ**

ಕರ್ನಾಟಕ ಸರ್ಕಾರದ 2017–18 ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ ಈ ಹೊಸ ಯೋಜನೆಯನ್ನ 2 ಮಾರ್ಚ್ 2018 ರಂದು ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯ ನವರಿಂದ "“ಆರೋಗ್ಯ ಕರ್ನಾಟಕ” ಎಂಬ ಹೆಸರಿನಲ್ಲಿ ಉದ್ಘಾಟಿಸಲಾಯಿತು. ಟಿ.ನರಸೀಪುರದ 5 ಜನ ನಾಗರೀಕರಿಗೆ ಈ ಕಾರ್ಡನ್ನು ಸಾಂಕೇತಿಕವಾಗಿ ನೀಡಿ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು.[4] (ಜಯಲಕ್ಷೀ, ಭಾಗ್ಯಮ್ಮ, ಮಹ್ಮದ್ ಇಬ್ದುಲ್, ಆರ್.ಸೋಮಶೇಖರ್, ಆರ್.ಎಸ್.ಮಹೇಶ್) ರಾಜ್ಯದಲ್ಲಿ ಮೊದಲಿಗೆ 11 ಪ್ರಮುಖ ಆಸ್ಪತ್ರೆಗಳಲ್ಲಿ ಯೋಜನೆಯನ್ನು ಜಾರಿಗೊಳಿಸಲಾಯಿತು. 2018 ರ ಏಪ್ರಿಲ್ 1 ರಿಂದ ರಾಜ್ಯದಾದ್ಯಂತ ಯೋಜನೆ ಜಾರಿಗೆ ಬಂತು. ಈ ಯೋಜನೆಯನ್ನ ಕಾಲಕ್ರಮೇಣ ಕೇಂದ್ರ ಸರ್ಕಾರವು ಜಾರಿಗೆ ತಂದ “ಆಯುಷ್ಮಾನ್ ಭಾರತ್” ಯೋಜನೆಯೊಂದಿಗೆ 30 ಅಕ್ಟೋಬರ್ 2018 ರಂದು ಸಂಯೋಜನೆಗೊಳಿಸಿ ಪ್ರಸ್ತುತ ಇದನ್ನು “ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ” ಎಂದು ಕರೆಯಲಾಗುತ್ತದೆ. ಈ ಯೋಜನೆಯಿಂದ 2022–23 ರ ಕಳೆದ ವರ್ಷಾಂತ್ಯಕ್ಕೆ ಸರ್ಕಾರಿ ಆಸ್ಪತ್ರೆಗಳಲ್ಲಿ 13.16 ಲಕ್ಷ ಜನ, ಖಾಸಗಿ ಆಸ್ಪತ್ರೆಗಳಲ್ಲಿ 1.07 ಲಕ್ಷ ಜನರು ಚಿಕಿತ್ಸೆಯ ಅನುಕೂಲ ಪಡೆದುಕೊಂಡಿದ್ದಾರೆ.[5]

**ಯೋಜನೆಯ ಮಹತ್ವ**

ಸಮಗ್ರ ಆರೋಗ್ಯ ಕರ್ನಾಟಕ ಯೋಜನೆಯು (Universal Health Coverage) ಕರ್ನಾಟಕದ 1 ಕೋಟಿ 30 ಲಕ್ಷ ಕುಟುಂಬಗಳನ್ನು ಇದರ ವ್ಯಾಪ್ತಿಗೆ ತಂದು 2 ವಿಧದ ಫಲಾನುಭವಿಗಳನ್ನು ಯಾವುದೇ ವರ್ಗಗಳ ಬೇದಭಾವವಿಲ್ಲದೇ ಗುರ್ತಿಸಲಾಗಿದೆ. ಮೊದಲನೆಯವರು ಬಿ.ಪಿ.ಎಲ್ ಫಲಾನುಭವಿಗಳು ಇವರಿಗೆ ಸರ್ಕಾರಿ ಆಸ್ಪತ್ರೆ ಮತ್ತು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಒಂದು ಕುಟುಂಬಕ್ಕೆ 5 ಲಕ್ಷಗಳ ವರೆಗೆ ಉಚಿತ ಚಿಕಿತ್ಸೆ ದೊರೆಯುತ್ತದೆ. ಎರಡನೇಯವರು ಎ.ಪಿ.ಎಲ್ ಫಲಾನುಭವಿಗಳು ಇವರಿಗೆ ಸರ್ಕಾರಿ ಆಸ್ಪತ್ರೆ ಮತ್ತು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಶೇ. 30% ಚಿಕಿತ್ಸೆಯ ವೆಚ್ಚ ದೊರೆಯುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೇ ಜನಪರವಾದ, ಪ್ರಗತಿದಾಯಕ ಯೋಜನೆಯಾಗಿದ್ದು ಭಾರತದಲ್ಲೇ ಪ್ರಥಮ ಆರೋಗ್ಯ ಕ್ರಾಂತಿ ಎಂಬುದಾಗಿ ಈ ಯೋಜನೆಯನ್ನ ಬಣ್ಣಿಸಲಾಗಿದೆ. ಅಂದಿನ

---

[3] ಕರ್ನಾಟಕದ 14 ನೇ ವಿಧಾನ ಸಭೆ, 14 ನೇ ಅಧಿವೇಶನದ ನಡಾವಳಿಗಳು ದಿನಾಂಕ 20–06–2017, ಪುಟ–54

[4] ಆರೋಗ್ಯ ಕರ್ನಾಟಕ ಯೋಜನೆಯ ಉದ್ಘಾಟನಾ ಕಾರ್ಯಕ್ರಮ ದಿನಾಂಕ 02 ಮಾರ್ಚ್ 2018

[5] ಪ್ರಜಾವಾಣಿ ಪತ್ರಿಕೆ, ದಿನಾಂಕ 29 ಜನವರಿ 2023, ಪುಟ–6

ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ದರಾಮಯ್ಯ ನವರು ಉದ್ಘಾಟನಾ ಭಾಷಣದಲ್ಲಿ ಕರ್ನಾಟಕದ ಆರೋಗ್ಯ ಕ್ಷೇತ್ರದಲ್ಲಿ ಒಂದು ಹೊಸ ಮೈಲುಗಲ್ಲು, ಕ್ರಾಂತಿಕಾರಕ ಹೆಜ್ಜೆ ಎಂದಿದ್ದಾರೆ. ಮುಂದುವರೆದು ಈ ಯೋಜನೆಯ ಕಲ್ಪನೆ, ಅದರ ಅನುಷ್ಠಾನ ಎಲ್ಲಾವು ಆರೋಗ್ಯ ಸಚಿವರಾದ ಶ್ರೀ ರಮೇಶ್ ಕುಮಾರ್ ರವರದು ಹಾಗಾಗಿ ಯೋಜನೆಯ ರೂವಾರಿಗಳು ಅವರೇ ಎಂಬುದಾಗಿ ಸಂಭೋಧಿಸಿದ್ದಾರೆ.[6] ರಮೇಶ್ ಕುಮಾರ್ ರವರ ದೂರದೃಷ್ಟಿ ಮತ್ತು ಇಚ್ಚಾಶಕ್ತಿಯಿಂದ ಮಾನ್ಯ ಸಿದ್ದರಾಮಯ್ಯ ನವರ ಸಹಕಾರದಿಂದ ಈ ಯೋಜನೆಯು ರೂಪುತಳಿಯಿತು ಎಂದು ಹೇಳಬಹುದು.

**ಪ್ರಾಥಮಿಕ ಆರೋಗ್ಯ ವಿಸ್ತರಣಾ ಚಿಕಿತ್ಸಾ ಕೇಂದ್ರಗಳು**

ಕರ್ನಾಟಕ ಸರ್ಕಾರದ 2017–18 ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ ಮತ್ತೊಂದು ಪ್ರಮುಖ ಹೊಸ ಯೋಜನೆಯಾಗಿದೆ.[7] ಗ್ರಾಮೀಣ ಭಾಗದ ಬಹುಪಾಲು ಜನರ ಪ್ರಥಮ ಚಿಕಿತ್ಸಾ ಕೇಂದ್ರಗಳೇ ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿವೆ. ಇಂತಹ ಕೇಂದ್ರಗಳನ್ನ ಸ್ಥಾಪಿಸುವಾಗ ರಮೇಶ್ ಕುಮಾರ್ ರವರು ಸದನದ ಭಾಷಣದಲ್ಲಿ ತಿಳಿಸಿರುವಂತೆ, "ನಾವು ಇದುವರೆಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನ ಜನಸಂಖ್ಯೆಯ ಆಧಾರದ ಮೇಲೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ವೈಜ್ಞಾನಿಕವಾಗಿ ಕೊಟ್ಟಿರಲಿಲ್ಲ ನಮಗೆ ಇಷ್ಟ ಬಂದಂತೆ ಕೊಟ್ಟುಬಿಟ್ಟಿದ್ದವು. ಇದರಿಂದ ಕೆಲವು ಕಡೆ 10 ಕಿ.ಮೀ ವ್ಯಾಪ್ತಿ ಒಳಗಡೆ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನ ಇನ್ನು ಕೆಲವು ಕಡೆ 20 ಕಿ.ಮೀ ವ್ಯಾಪ್ತಿಯಲ್ಲಿ ಒಂದೂ ಪ್ರಾಥಮಿಕ ಆರೋಗ್ಯ ಕೇಂದ್ರವು ಇರಲಿಲ್ಲ".[8] ಈ ರೀತಿಯ ಸಮಸ್ಯೆ ಇರುವುದನ್ನ ಮನಗಂಡ ಸಚಿವರಾದ ರಮೇಶ್ ಕುಮಾರ್ ರವರು ಇಲಾಖೆಯ ಮೂಲಕ ರಾಜ್ಯದ ಮ್ಯಾಪ್ ಇಟ್ಟುಕೊಂಡು ಜಿ.ಪಿ.ಎಸ್ ಮಾಡುವ ಮೂಲಕ 10–12 ಕಿ.ಮೀ. ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಇಲ್ಲದಿರುವ ಸ್ಥಳಗಳನ್ನ ಗುರ್ತಿಸಿ ರಾಜ್ಯದಲ್ಲಿ ಹೊಸದಾಗಿ 150 ಪ್ರಾಥಮಿಕ ಆರೋಗ್ಯ ವಿಸ್ತರಣಾ ಚಿಕಿತ್ಸಾ ಕೇಂದ್ರಗಳನ್ನ ಮಂಜೂರು ಮಾಡಿ ಸ್ಥಾಪಿಸಲಾಗಿದೆ.[9] ಇಲ್ಲಿ ಒಬ್ಬ ವೈದ್ಯರು, ಒಬ್ಬ ನರ್ಸ್, ಒಬ್ಬ ಪಾರ್ಮಾಸಿಸ್ಟ್ ಇದ್ದು ಸೇವೆ ನೀಡುತ್ತಾರೆ.

ಈ ಮೂಲಕ ಪ್ರಾಥಮಿಕ ಹಂತದಲ್ಲಿ ಚಿಕಿತ್ಸೆ ವಂಚಿತರಾಗಿದ್ದ ಜನರಿಗೆ ಚಿಕಿತ್ಸೆಯ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ. ಜನರು ದೂರ ದೂರದ ಸ್ಥಳಗಳಿಗೆ ಪರದಾಡುವುದನ್ನ ತಪ್ಪಿಸಿ ಪ್ರಥಮ ಚಿಕಿತ್ಸೆ ಹತ್ತಿರದಲ್ಲೆ ಸಿಗುವಂತೆ ಮಾಡಿದ್ದಾರೆ. ಇದು ಅವರ ಮತ್ತೊಂದು ದೂರದೃಷ್ಟಿ ಯೋಜನೆ ಎನ್ನಬಹುದಾಗಿದೆ.

**ಆಂಬ್ಯುಲೆನ್ಸ ಸೇವೆ ಮೇಲ್ದರ್ಜೆಗೆ**

ಇದು ಸಹ ಕರ್ನಾಟಕ ಸರ್ಕಾರದ 2017–18 ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ ಹೊಸ ಯೋಜನೆಯಾಗಿದೆ.[10] ರಾಜ್ಯದಲ್ಲಿ ಉಗಿಏ ಇಚಖಉ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 711

[6] ಆರೋಗ್ಯ ಕರ್ನಾಟಕ ಯೋಜನೆಯ ಉದ್ಘಾಟನಾ ಕಾರ್ಯಕ್ರಮ ದಿನಾಂಕ 02 ಮಾರ್ಚ್ 2018
[7] ಕರ್ನಾಟಕ ಸರ್ಕಾರದ 2017–18 ನೇ ಸಾಲಿನ ಬಜೆಟ್ ಪುಟ–66
[8] ಕರ್ನಾಟಕದ 14 ನೇ ವಿಧಾನ ಸಭೆ, 15 ನೇ ಅಧಿವೇಶನದ ನಡಾವಳಿಗಳು, ದಿನಾಂಕ 22–11–2017, ಪುಟ–196–197
[9] ಕರ್ನಾಟಕದ 14 ನೇ ವಿಧಾನ ಸಭೆ, 15 ನೇ ಅಧಿವೇಶನದ ನಡಾವಳಿಗಳು, ದಿನಾಂಕ 22–11–2017, ಪುಟ–196–197
[10] ಕರ್ನಾಟಕ ಸರ್ಕಾರದ 2017–18 ನೇ ಸಾಲಿನ ಬಜೆಟ್ ಪುಟ–66

ಆಂಬ್ಯುಲೆನ್ಸಗಳ ಜೊತೆಗೆ ರಾಜ್ಯ ಆರೋಗ್ಯ ಇಲಾಖೆಯ 827 ಆಂಬ್ಯುಲೆನ್ಸಗಳೊಡನೆ ಒಟ್ಟು ಗೂಡಿಸಿ ಪ್ರತಿ 10–15 ಕಿ.ಮೀ. ವ್ಯಾಪ್ತಿಯಲ್ಲಿ 35 ಸಾವಿರ ಜನಸಂಖ್ಯೆಗೆ ಒಂದರಂತೆ ಆಂಬ್ಯುಲೆನ್ಸ ಸೇವೆಯನ್ನು ವಿಸ್ತರಣೆ ಮಾಡಲಾಗಿದೆ. ಯಾವುದೇ ಸನ್ನಿವೇಶದಲ್ಲೂ ಕೂಡ ರೋಗಿ ಬಂದು ಆಸ್ಪತ್ರೆ ಸೇರಲು 20 ನಿಮಿಷಕ್ಕಿಂತ ಹೆಚ್ಚಾಗಬಾರದು ಎನ್ನುವ ಉದ್ದೇಶದಿಂದ ಈ ನೀತಿ ರೂಪಿಸಲಾಯಿತು. ಅಂಬ್ಯುಲೆನ್ಸ್‌ಗೆ ಹೋಗುವ ನರ್ಸ್ ಮತ್ತು ಇತರೇ ಸಿಬ್ಬಂದಿ ಪೂರ್ಣ ತರಭೇತಿ ಪಡೆದವರು ಇರುತ್ತಾರೆ. ವಾಹನದಲ್ಲಿ ತುರ್ತು ಸಂದರ್ಭದಲ್ಲಿ ಬಳಸಲು ಪೋರ್ಟೆಬಲ್ ವೆಂಟಿಲೇಟರ್ ಸೌಲಭ್ಯ ಇರುತ್ತದೆ ತಾಲೂಕು ಆಸ್ಪತ್ರೆಗೆ ಬಂದರೇ ಅಲ್ಲಿ ಐ.ಸಿ.ಯು ಘಟಕ ಇರುತ್ತದೆ. ಈ ರೀತಿಯಾಗಿ ತುರ್ತು ಸನ್ನಿವೇಶಗಳನ್ನ ನಿಭಾಯಿಸಲು ಆಗುವಂತೆ ಆಂಬ್ಯುಲೆನ್ಸ್ ಮತ್ತು ಆಸ್ಪತ್ರೆಗಳ ನಡುವೆ ಸಮನ್ವಯತೆಯನ್ನ ಸಾಧಿಸಲಾಗಿದೆ. ಆಂಬ್ಯುಲೆನ್ಸ್ ಆಡಳಿತವನ್ನು ತಾಲೂಕು ಆರೋಗ್ಯ ಅಧಿಕಾರಿಗೆ ವಹಿಸಲಾಗಿದೆ.

**ಉಚಿತ ಡಯಾಲಿಸಿಸ್ ಘಟಕಗಳ ಸ್ಥಾಪನೆ**

ಉಚಿತ ಡಯಾಲಿಸಿಸ್ ಕೇಂದ್ರಗಳನ್ನು ಸ್ಥಾಪಿಸುವುದು 2013–14 ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಆದರೇ ಅದು ಕಾರ್ಯರೂಪಕ್ಕೆ ಬಂದಿದ್ದು ಶ್ರೀ ರಮೇಶ್ ಕುಮಾರ್ ರವರು ಆರೋಗ್ಯ ಸಚಿವರಾದ ಮೇಲೆ ಅವರು ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳಲ್ಲಿ ಘಟಕಗಳನ್ನು ತೆರೆಯಲು ಕಾರ್ಯ ಪ್ರವೃತ್ತರಾದರು. ಗ್ಲೋಬಲ್ ಟೆಂಡರ್ ಮೂಲಕ ಸರ್ಕಾರಿ–ಖಾಸಗಿ ಸಹಭಾಗಿತ್ವದ (PPP) ಮಾದರಿಯಲ್ಲಿ ಈ ಯೋಜನೆಯನ್ನ ಅನುಷ್ಠಾನ ಮಾಡಲಾಗಿದೆ. ಹೊರಗುತ್ತಿಗೆ ಪಡೆದವರಿಗೆ ಒಂದು ಕೇಸ್‌ಗೆ ಇಂತಿಷ್ಟು ಹಣವೆಂದು ಸರ್ಕಾರವೇ ಅವರಿಗೆ ಭರಿಸುತ್ತದೆ. ರೋಗಿಗಳಿಗೆ ಯಾವುದೇ ಮಾನದಂಡಗಳಿಲ್ಲದೆ ಎಲ್ಲರಿಗೂ ಉಚಿತವಾಗಿ ಸೌಲಭ್ಯ ದೊರೆಯುತ್ತದೆ.[11] ಪೆಬ್ರವರಿ 2018 ರ ವೇಳೆಗೆ 171 ಡಯಾಲಿಸಿಸ್ ಘಟಕಗಳನ್ನ ಸ್ಥಾಪಿಸಲಾಗಿತ್ತು.

ಸಾಮಾನ್ಯವಾಗಿ ಒಂದು ಬಾರಿ ಡಯಾಲಿಸಿಸ್‌ಗೆ ಒಳಗಾದರೆ 1000 ದಿಂದ 1500 ಹಣ ನೀಡಬೇಕು. ಒಬ್ಬ ರೋಗಿಗೆ ವಾರದಲ್ಲಿ 2 ದಿನ ಇಲ್ಲವೆ 3 ದಿನ ಇರುತ್ತೇ, ಕೆಲವರಿಗೆ ತಿಂಗಳಿಗೆ 3 ರಿಂದ 4 ಬಾರಿ ಡಯಾಲಿಸಿಸ್ ಅವಶ್ಯಕತೆ ಇರುತ್ತದೆ. ಇದು ಸಾಮಾನ್ಯ ಬಡರೋಗಿಗಳಿಗೆ ತುಂಬಾ ಹೊರೆಯಾಗಿ ಪರಿಣಮಿಸುತ್ತದೆ. ತಿಂಗಳಿಗೆ 10 ಸಾವಿರದಿಂದ 20 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಅನಿವಾರ್ಯ ಪರಿಸ್ಥಿತಿಗೆ ತಲುಪಿರುತ್ತಾರೆ ಅವರ ತಿಂಗಳ ಆದಾಯವೇ ಅಷ್ಟಿರುವುದಿಲ್ಲ. ಇಂತಹ ಅನೇಕ ರೋಗಿಗಳಿಗೆ ಅನುಕೂಲಮಾಡಿ ಅವರನ್ನು ಆರ್ಥಿಕ ದುಸ್ಥಿತಿಯಿಂದ ಹೊರಬರುವಂತೆ ಮಾಡಲು ಮತ್ತು ಸಂದಿಗ್ದ ಪರಿಸ್ಥಿತಿಯನ್ನು ಎದುರಿಸಲು ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ ಮತ್ತು ತಾಲೂಕು ಆಸ್ಪತ್ರೆಗಳಲ್ಲಿ ಉಚಿತ ಡಯಾಲಿಸಿಸ್ ಕೇಂದ್ರಗಳನ್ನ ಸ್ಥಾಪಿಸಿ ಚಾಲನೆ ನೀಡಲಾಯಿತು.[12]

---

[11] ಕರ್ನಾಟಕದ 14 ನೇ ವಿಧಾನಸಭೆ, 14 ನೇ ಅಧಿವೇಶನದ ನಡಾವಳಿಗಳು, ದಿನಾಂಕ 20–06–2017, ಪುಟ–44

[12] ಕರ್ನಾಟಕದ 14ನೇ ವಿಧಾನಸಭೆ, 15 ನೇ ಅಧಿವೇಶನದ ನಡಾವಳಿಗಳು, ದಿನಾಂಕ 22–11–2017, ಪುಟ–197

**ಉಚಿತ ಸಿ.ಟಿ. ಸ್ಕ್ಯಾನ್ ಮತ್ತು ಎಂ.ಆರ್.ಐ. ಸ್ಕ್ಯಾನ್ ಸೌಲಭ್ಯಗಳು**

ಶ್ರೀ ರಮೇಶ್ ಕುಮಾರ್ ರವರ ಮತ್ತೊಂದು ಪ್ರಮುಖ ಕೊಡುಗೆ ಎಂದರೇ ಅದು ರಾಜ್ಯದ 30 ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತ ಸಿ.ಟಿ. ಸ್ಕ್ಯಾನ್ ಮತ್ತು ಎಂ.ಆರ್.ಐ. ಸ್ಕ್ಯಾನ್ ಸೌಲಭ್ಯಗಳನ್ನ ಒದಗಿಸಿರುವುದು.[13] ಫೆಬ್ರವರಿ–2018 ರ ಕರ್ನಾಟಕ ಬಜೆಟ್ ಈ ಸೌಲಭ್ಯಗಳು ಸಹ ಸರ್ಕಾರಿ–ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಒದಗಿಸಲಾಗಿದೆ. ಖಾಸಗಿ ಡಯಾಗ್ನಸ್ಟಿಕ್ ಸೆಂಟರ್‌ಗಳಲ್ಲಿ ಸಿ.ಟಿ ಮತ್ತು ಎಂ.ಆರ್.ಐ ಸ್ಕ್ಯಾನ್‌ಗಳನ್ನ ಮಾಡಿಸಬೇಕಾದರೇ 7 ರಿಂದ 8 ಸಾವಿರ ರೂಪಾಯಿಗಳ ವರೆಗೂ ನೀಡಬೇಕಾಗುತ್ತದೆ. ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳನ್ನ ಸ್ಕ್ಯಾನ್‌ಗೆ ಹೊರಗಡೆ ಕಳುಹಿಸುತ್ತಿದ್ದರಿಂದ ತುಂಬಾ ಹೊರೆಯಾಗುತ್ತಿತ್ತು ಅಷ್ಟು ಮೊತ್ತವನ್ನು ಹೊಂದಿಸಲಾಗದೇ ತಡಮಾಡಿ ಕೆಲವು ರೋಗಗಳು ಮತ್ತಷ್ಟು ಉಲ್ಬಣವಾಗಿ ಪ್ರಾಣಕ್ಕೆ ಸಂಚಕಾರ ತಂದುಕೊಂಡಿರುವ ಎಷ್ಟೋ ಪ್ರಕರಣಗಳು ನಡೆಯುತ್ತವೆ. ಈ ರೀತಿಯ ಸಂಕಷ್ಟಗಳಿಂದ ರೋಗಿಗಳನ್ನ ಪಾರುಮಾಡಲು ಎಲ್ಲಾ ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತ ಸಿ.ಟಿ. ಸ್ಕ್ಯಾನ್ ಮತ್ತು ಎಂ.ಆರ್.ಐ. ಸ್ಕ್ಯಾನ್ ಸೌಲಭ್ಯಗಳನ್ನ ಮಾಡಲಾಗಿದೆ.[14] ಕೆಲವು ಕಡೆಗಳಲ್ಲಿ 24*7 ಸ್ಕ್ಯಾನ್ ಸೇವೆಗಳನ್ನು ನೀಡುತ್ತಿರುವುದು ಸಹ ಜನರಿಗೆ ಮತ್ತಷ್ಟು ಅನುಕೂಲವಾಗಿದೆ. ಅವಶ್ಯವಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಉತ್ತಮ ಗುಣಮಟ್ಟದ ಸುಧಾರಿತ ತಂತ್ರಜ್ಞಾನದ ಡಿಜಿಟೆಲ್ ಎಕ್ಸರೇ ಸೌಲಭ್ಯಗಳನ್ನು ಒದಗಿಸಲಾಗಿದೆ.

**ಹೊಸ ಔಷಧ ನೀತಿ ಮತ್ತು ಜೆನರಿಕ್ ಔಷಧಿ ಮಳಿಗೆಗಳ ಸ್ಥಾಪನೆ**

ಶ್ರೀ ರಮೇಶ್ ಕುಮಾರ್ ರವರು ಆಸ್ಪತ್ರೆಗಳಿಗೆ ತಪಾಸಣೆಗೆ ಹೋದಾಗ ಅಲ್ಲಿ ಹತ್ತಾರು ಕೋಟಿ ಮೌಲ್ಯದ ಅವಧಿ ಮೀರಿದ ಔಷಧಿಗಳು ಹೆಚ್ಚು ಇರುತ್ತಿದ್ದನ್ನು ಗಮನಿಸಿ ಈ ರೀತಿಯಾಗಿ ಸರ್ಕಾರದ ಹಣ ವ್ಯರ್ಥವಾಗುತ್ತಿದ್ದನ್ನು ತಪ್ಪಿಸಲು ಒಂದು ಹೊಸ ನೀತಿಯನ್ನು ರೂಪಿಸಲಾಯಿತು. ಅದರ ಅನ್ವಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ತಿಂಗಳಿಗೆ ಬರುವ ಹೊರ ರೋಗಿ ಮತ್ತು ಒಳ ರೋಗಿ ಸಂಖ್ಯೆಯನ್ನು ಇಟ್ಟುಕೊಂಡು ಔಷಧಿಗಳ ಇಂಡೆಂಟ್‌ನ್ನು ಮಾಡಿ ಡಿಸ್ಟ್ರಿಕ್ಟ್ ಡ್ರಗ್ಸ್ ಲಾಜಿಸ್ಟಿಕ್ ಸೊಸೈಟಿಗೆ ಕಳುಹಿಸಬೇಕು ಮಾಹಿತಿ ತಲುಪಿದ 48 ಗಂಟೆಗಳ ಒಳಗೆ ಅವರಿಗೆ ಔಷಧಿ ಸರಬರಾಜು ಆಗುವುದಕ್ಕೆ ವ್ಯವಸ್ಥೆ ಮಾಡಲಾಗಿದೆ.[15] ಮೊದಲು ಅನುದಾನಕ್ಕೆ ಅನುಗುಣವಾಗಿ ಔಷಧಿ ಖರೀದಿ ಮಾಡಲಾಗುತ್ತಿತ್ತು ಈಗ ರೋಗಿಗಳ ಬೇಡಿಕೆಗೆ ಅನುಗುಣವಾಗಿ ಖರೀದಿ ಮಾಡುವ ವ್ಯವಸ್ಥೆ ಜಾರಿಗೆ ತರಲಾಗಿದೆ. ಆಸ್ಪತ್ರೆಗಳಲ್ಲಿ ಲಭ್ಯವಿಲ್ಲದೇ ಇರುವ ಔಷಧಿಗಳಿಗೆ ಡಾಕ್ಟರ್‌ಗಳು ಬ್ರಾಂಡೆಡ್ ಔಷಧಿಗಳಿಗೆ ಚೀಟಿ ಕೊಡುವುದನ್ನು ನಿಷೇಧ ಮಾಡಲಾಗಿದೆ. ಬದಲಿ ವ್ಯವಸ್ಥೆಯಾಗಿ ಆಸ್ಪತ್ರೆ ಆವರಣದಲ್ಲಿರುವ ಜೆನರಿಕ್ ಔಷಧಿ ಮಳಿಗೆಗಳಲ್ಲಿ ಪಡೆದುಕೊಳ್ಳಲು ಸೌಲಭ್ಯ ಕಲ್ಪಿಸಲಾಗಿದೆ.

---

[13] ಕರ್ನಾಟಕದ 14ನೇ ವಿಧಾನಸಭೆ, 15 ನೇ ಅಧಿವೇಶನದ ನಡಾವಳಿಗಳು, ದಿನಾಂಕ 22–11–2017, ಪುಟ–198

[14] ಶ್ರೀ ಕೆ.ಆರ್. ರಮೇಶ್ ಕುಮಾರ್ ರವರೊಂದಿಗೆ ಸಂದರ್ಶನ ದಿನಾಂಕ: 12–12–2023

[15] ಕರ್ನಾಟಕದ 14 ನೇ ವಿಧಾನಸಭೆ, 15 ಅಧಿವೇಶನದ ನಡಾವಳಿಗಳು, ದಿನಾಂಕ 22–11–2017, ಪುಟ–202

ಜೆನರಿಕ್ ಮೆಡಿಸನ್ ನೀಡುವ ಸೌಲಭ್ಯವನ್ನು ಮೊದಲಿಗೆ 2008 ರ ನವೆಂಬರ್‌ನಲ್ಲಿ ಕೇಂದ್ರಸರ್ಕಾರ ಪ್ರಾರಂಭಮಾಡಿತು. ಇದು ಫಊಊಔ ಪ್ರಮಾಣೀಕೃತ ಔಷಧಿಗಳಾಗಿದ್ದು ಅತ್ಯಂತ ಕಡಿಮೆ ಬೆಲೆಯಲ್ಲಿ ಸುಮಾರು ಶೇ. 70 ರಿಂದ 75 ರಷ್ಟು ರಿಯಾಯಿತಿ ದರದಲ್ಲಿ ದೊರೆಯುತ್ತವೆ. ಇವು ಉತ್ಪಾದಿತ ಕಂಪನಿಯಿಂದ ನೇರವಾಗಿ ಅಂಗಡಿಗಳಿಗೆ ಪೂರೈಕೆಯಾಗುವುದರಿಂದ ಬೆಲೆ ಕಡಿಮೆ ಇರುತ್ತದೆ.

ಮಾನ್ಯ ರಮೇಶ್ ಕುಮಾರ್ ರವರು ಕರ್ನಾಟಕದ ಕೇಂದ್ರ ಮಂತ್ರಿಯಾಗಿದ್ದ ಮಾನ್ಯ ಅನಂತಕುಮಾರ್ ರವರೊಂದಿಗೆ ಚರ್ಚಿಸಿ ಒಔಗ ಮಾಡಿಕೊಂಡು ರಾಜ್ಯದಲ್ಲಿ 200 ಜನೌಷಧಿ ಮಳಿಗೆಗಳನ್ನ ಪ್ರಾರಂಭಮಾಡಿದರು.[16] ಬಹುತೇಕ ಎಲ್ಲಾ ಜಿಲ್ಲಾ ಆಸ್ಪತ್ರೆ ಮತ್ತು ತಾಲೂಕು ಆಸ್ಪತ್ರೆಗಳ ಆವರಣದಲ್ಲಿ ಪ್ರಸ್ತುತ ಇದರ ಮಳಿಗೆಗಳು ಲಭ್ಯವಿದ್ದಾವೆ. ದುಬಾರಿ ಬೆಲೆ ನೀಡಿ ಖರೀದಿಸಿ ಹಣವನ್ನು ವ್ಯರ್ಥಮಾಡಿಕೊಳ್ಳುತ್ತಿದ್ದ ರೋಗಿಗಳಿಗೆ ಜನೌಷಧಿ ಮಳಿಗೆಗಳು ಉಳಿತಾಯದ ವರಪ್ರಸಾದದ ಕೇಂದ್ರಗಳಾಗಿವೆ ಎಂದು ಹೇಳಬಹುದು.

**ಆಸ್ಪತ್ರೆ ಗಳಲ್ಲಿ ಐ.ಸಿ.ಯು ಘಟಕಗಳ ಸ್ಥಾಪನೆ**

ಜೀವ ಅಮೂಲ್ಯ ಹಾಗಾಗಿ ಆಪತ್ತಿನಲ್ಲಿರುವ ವ್ಯಕ್ತಿಯ ಜೀವ ಉಳಿಸಲು ಜಿಲ್ಲಾ ಆಸ್ಪತ್ರೆಗಳಲ್ಲಿ 10 ಹಾಸಿಗೆಗಳ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ 3 ಹಾಸಿಗೆಗಳ ಸಾಮರ್ಥ್ಯದ ತೀವ್ರ ನಿಗಾ ಘಟಕಗಳ ಸೌಲಭ್ಯ ಕಲ್ಪಿಸಲಾಯಿತು.[17]

**ಉಚಿತ ಪ್ರಯೋಗ ಶಾಲೆ ಸೇವೆ**[18]

ಈ ಯೋಜನೆಯ ಮೂಲಕ ಆರೋಗ್ಯ ಇಲಾಖೆಯ ಅಡಿಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಬಿ.ಪಿ.ಎಲ್. ಕಾರ್ಡುದಾರರಿಗೆ ಉಚಿತವಾದ ರೋಗ ನಿರ್ಣಯ ಮತ್ತು ರಕ್ತ ಪರೀಕ್ಷೆಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಬಿ.ಪಿ.ಎಲ್. ಕಾರ್ಡು ಇಲ್ಲದವರಿಗೆ ಕಡಿಮೆ ದರದಲ್ಲಿ ಸೌಲಭ್ಯಗಳು ದೊರೆಯುತ್ತವೆ.

**ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ನಿರ್ಮಾಣ**

ತಾಯಿ ಮತ್ತು ಮಗುವಿನ ಆರೋಗ್ಯ ಸುರಕ್ಷತೆಯ ಬಗ್ಗೆ ಹೆಚ್ಚಿನ ಆದ್ಯತೆ ನೀಡುವ ಸಲುವಾಗಿ 20 ಎಂ.ಸಿ.ಹೆಚ್ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ.[19] ಈ ಮೂಲಕ ತಾಯಿ ಮತ್ತು ಶಿಶು ಮರಣ ದರವನ್ನು ಹಂತ ಹಂತವಾಗಿ ಕಡಿಮೆಗೊಳಿಸಬಹುದು.

**ಆಸ್ಪತ್ರೆಗಳಲ್ಲಿ ಶುದ್ಧನೀರಿನ ಘಟಕಗಳು (ವಾಟರ್ ಫಿಲ್ಟರ್‌ಗಳು)**

ಮಾನ್ಯ ರಮೇಶ್ ಕುಮಾರ್ ರವರು ಆಸ್ಪತ್ರೆಗಳಿಗೆ ಭೇಟಿ ಕೊಟ್ಟಾಗ ಕುಡಿಯುವ ನೀರಿನ ಸೌಲಭ್ಯಗಳು ಇಲ್ಲದೇ ಇರುವುದನ್ನು ಗಮನಿಸಿ 21 ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ 140 ತಾಲ್ಲೂಕು ಆಸ್ಪತ್ರೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಸೌಲಭ್ಯ ಕಲ್ಪಿಸಿದರು.[20]

---

[16] ಕರ್ನಾಟಕದ 14 ನೇ ವಿಧಾನಸಭೆ, 14 ನೇ ಅಧಿವೇಶನದ ನಡಾವಳಿಗಳು, ದಿನಾಂಕ 20–06–2017, ಪುಟ–44–45

[17] ಕರ್ನಾಟಕ ಸರ್ಕಾರದ 2015–16 ನೇ ಸಾಲಿನ ಬಜೆಟ್, ಪುಟ–56

[18] ಕರ್ನಾಟಕ ಸರ್ಕಾರದ 2016–17 ನೇ ಸಾಲಿನ ಬಜೆಟ್, ಪುಟ–49

[19] ಕರ್ನಾಟಕ ಸರ್ಕಾರದ ಫೆಬ್ರವರಿ 2018–19 ನೇ ಸಾಲಿನ ಬಜೆಟ್, ಪುಟ–46

**ಉಪಸಂಹಾರ**

ಶ್ರೀ ರಮೇಶ್ ಕುಮಾರ್ ರವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾಗಿ ಜವಾಬ್ದಾರಿಯನ್ನ ವಹಿಸಿಕೊಂಡ ಮೇಲೆ ಜನಪರವಾದ ಯೋಜನೆಗಳನ್ನ ಜಾರಿಗೊಳಿಸಿದರು. ಆ ಯೋಜನೆಗಳೆಲ್ಲಾ ಬಡವರ್ಗ, ಮಧ್ಯಮ ವರ್ಗಗಳಿಗೆ ಆರೋಗ್ಯ ಸೌಲಭ್ಯಗಳನ್ನು ಉಚಿತವಾಗಿ ಇಲ್ಲವೇ ಕೈಗೆಟುಕುವ ದರದಲ್ಲಿ ದೊರೆಯುಂತೆ ಮಾಡಿ ಮೆಚ್ಚುಗೆಗೆ ಪಾತ್ರರಾದರು. ತಾನು ಅಂದುಕೊಂಡ ಯೋಜನೆಗಳನ್ನು ಜಾರಿಗೆ ತರಲು ಅವಧಿಯಿದ್ದಕ್ಕೂ ಪ್ರಯತ್ನಪಟ್ಟು ಎಷ್ಟು ಸಾದ್ಯವೋ ಅಷ್ಟು ಬದ್ದತೆಯಿಂದ ಕೆಲಸ ಮಾಡಿರುವುದನ್ನ ತಳ್ಳಿಹಾಕುವಂತಿಲ್ಲ. ಆದರೇ ಸರ್ಕಾರದ ಎಷ್ಟೇ ಯೋಜನೆಗಳು ಬಂದರೂ ಸಹ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ, ವೈದ್ಯರ ಕೊರತೆ, ಸಿಬ್ಬಂದಿ ಕೊರತೆ, ರೋಗಿಗಳ ಪ್ರಮಾಣಕ್ಕೆ ತಕ್ಕಂತೆ ಆರೋಗ್ಯ ಸೌಲಭ್ಯಗಳ ಕೊರತೆ ಹೀಗೆ ಹತ್ತು ಹಲವು ಸಮಸ್ಯೆಗಳಿಂದ ಇಂದಿಗೂ ಮುಕ್ತವಾಗಿಲ್ಲ ಎನ್ನುವುದು ಗಮನಾರ್ಹವೆನ್ನಬಹುದು. ಶ್ರೀ ರಮೇಶ್ ಕುಮಾರ್ ರವರ ಅವದಿಯಲ್ಲಿ ಜಾರಿಗೊಳಿಸಿದ "ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ–2017ವು ವಿವಾದಕ್ಕೆ ಎಡೆಮಾಡಿಕೊಟ್ಟಿತ್ತು. ಅದರ ವಿರುದ್ದ ರಾಜ್ಯದ ಖಾಸಗಿ ಆಸ್ಪತ್ರೆಗಳ ವೈದ್ಯರುಗಳು ಬೆಳಗಾವಿಯ ಸುವರ್ಣ ಸೌಧದ ಮುಂದೆ ಮುಷ್ಕರ ನಡೆಸಿದ್ದರು. ಈ ವಿಧೇಯಕದ ಪರ ಮತ್ತು ವಿರುದ್ಧವಾದ ಚರ್ಚೆಗಳು ಸದನದಲ್ಲಿ ಹಾಗೂ ಮಾಧ್ಯಮಗಳಲ್ಲಿ ನಡೆದಿದ್ದನ್ನು ಗುರ್ತಿಸಬಹುದಾಗಿದೆ.

ಒಟ್ಟಾರೇಯಾಗಿ ಹೇಳುವುದಾದರೆ, ಶ್ರೀ ರಮೇಶ್ ಕುಮಾರ್ ರವರು ತಮಗೆ ಬಂದ ಅವಕಾಶವನ್ನ ದುರುಪಯೋಗ ಮಾಡಿಕೊಳ್ಳದೇ ಜನಪರವಾಗಿ, ಬದ್ದತೆಯಿಂದ ಕಾರ್ಯನಿರ್ವಹಿಸಿ ಇಲಾಖೆಯ ಸೌಲಭ್ಯಗಳನ್ನ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಿಸಬೇಕೆಂದು ಮಾಡಿದ ಪ್ರಯತ್ನಗಳಲ್ಲಿ ಬಹುತೇಕ ಯಶಸ್ವಿಯಾಗಿದ್ದರೆಂದು ಹೇಳಬಹುದು.

**ಆಕರಗಳು**


- ಕರ್ನಾಟಕದ 14 ನೇ ವಿಧಾನಸಭೆ 14 ನೇ ಅಧಿವೇಶನದ ನಡಾವಳಿಗಳು, ದಿನಾಂಕ 20–06–2017,
- ಕರ್ನಾಟಕದ 14ನೇ ವಿಧಾನಸಭೆ 15 ನೇ ಅಧಿವೇಶನದ ನಡಾವಳಿಗಳು, ದಿನಾಂಕ 22–11–2017,
- ಕರ್ನಾಟಕ ಸರ್ಕಾರದ ಮಾರ್ಚ್ 2017–18 ನೇ ಸಾಲಿನ ಬಜೆಟ್
- ಕರ್ನಾಟಕ ಸರ್ಕಾರದ ಫೆಬ್ರವರಿ 2018–19 ನೇ ಸಾಲಿನ ಬಜೆಟ್
- ಹಲೋ ಮಿನಿಸ್ಟರ್ ಲೈವ್ ಕಾರ್ಯಕ್ರಮ ಸಚಿವ ಶ್ರೀ ರಮೇಶ್ ಕುಮಾರ್ ರವರೊಂದಿಗೆ ಸುವರ್ಣನ್ಯೂಸ್‌ನಲ್ಲಿ ದಿನಾಂಕ 20 ಮಾರ್ಚ್–2017


[20] ಶ್ರೀ ಕೆ.ಆರ್. ರಮೇಶ್ ಕುಮಾರ್ ರವರೊಂದಿಗೆ ಸಂದರ್ಶನ ದಿನಾಂಕ: 12–12–2023

- ಕೆ.ಪಿ.ಎಂ.ಇ. ಕಾನೂನು / ಸುಲಿಗೆ ವಿಶೇಷ ಕಾರ್ಯಕ್ರಮ ಸಚಿವ ಶ್ರೀ ರಮೇಶ್ ಕುಮಾರ್ ರವರೊಂದಿಗೆ ಸುವರ್ಣನ್ಯೂಸ್‌ನಲ್ಲಿ ದಿನಾಂಕ 22 ಜೂನ್–2017
- ಆರೋಗ್ಯ ಕರ್ನಾಟಕ ಯೋಜನೆಯ ಉದ್ಘಾಟನಾ ಕಾರ್ಯಕ್ರಮ ದಿನಾಂಕ 02 ಮಾರ್ಚ್ 2018
- ಶ್ರೀ ಕೆ.ಆರ್. ರಮೇಶ್ ಕುಮಾರ್ ರವರೊಂದಿಗೆ ಸಂದರ್ಶನ ದಿನಾಂಕ: 12–12–2023
- ಪ್ರಜಾವಾಣಿ ಪತ್ರಿಕೆ, ದಿನಾಂಕ 29 ಜನವರಿ 2023, ಪುಟ–6
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ಷಿಕ ವರದಿ, 2021–22